# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1 | ಮಾನ್ಯ ಸದಸ್ಯರ ಹೆಸರು | : ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ) |
| 2 | ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : 193(1513) |
| 3 | ಉತ್ತರಿಸಬೇಕಾದ ದಿನಾಂಕ | : 10-03-2022 |
| 4 | ಉತ್ತರಿಸುವ ಸಚಿವರು | : ಕಾರ್ಮಿಕ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಕಟ್ಟಡ ಹಾಗೂ ಇತರೆ ಕಾರ್ಮಿಕರ ಆರೋಗ್ಯ ಸೇವೆ ಪಡೆಯಲು ಗದಗ, ಹಾವೇರಿ, ಧಾರವಾಡ ಮತ್ತು ಕಾರವಾರ ಜಿಲ್ಲೆಗಳಲ್ಲಿ ಎಷ್ಟು ಇ.ಎಸ್.ಐ ಚಿಕಿತ್ಸಾಲಯ ಹಾಗೂ ಆಸ್ಪತ್ರೆಗಳಿವೆ; (ವಿವರವಾದ ಮಾಹಿತಿ ನೀಡುವುದು). | ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳ ಇಲಾಖೆಯು (ಕಾರಾವಿ) ಕಾರ್ಮಿಕರ ರಾಜ್ಯ ವಿಮಾ ನಿಗಮವು ಗುರುತಿಸಿ ನೋಂದಾಯಿಸಲ್ಪಟ್ಟ ಕಾರ್ಮಿಕ ವಿಮಾದಾರರಿಗೆ ಹಾಗೂ ಅವರ ಕುಟುಂಬ ವರ್ಗದವರಿಗೆ (ಖಾಯಿಲೆಯ ಅವಧಿಯಲ್ಲಿ ವೇತನ ಸೌಲಭ್ಯ, ಪ್ರಾಸವ ಸೌಲಭ್ಯ ಮತ್ತು ಎಂಪಾಯ್‌ಮೆಂಟ್ ಇಂಜುರಿ) ಪೂರ್ಣ ಪ್ರಮಾಣದ ವೈದ್ಯಕೀಯ ಸೇವೆಯನ್ನು ಮಾತ್ರ ವಿಸ್ತರಿಸುತ್ತಿದೆ. |

| ಕ್ರ. ಸಂ. | ಜಿಲ್ಲೆ | ಕಾರ್ಯ ನಿರ್ವಹಿಸುತ್ತಿರುವ ಕಾರಾವಿ ಚಿಕಿತ್ಸಾಲಯ/ಆಸ್ಪತ್ರೆ |
|---|---|---|
| 1 | ಗದಗ | 1. ಕಾರಾವಿ ಚಿಕಿತ್ಸಾಲಯ, ಗದಗ<br>2. ಕಾರಾವಿ ಚಿಕಿತ್ಸಾಲಯ, ಹುಲಕೋಟಿ |
| 2 | ಧಾರವಾಡ | 1. ಕಾರಾವಿ ಚಿಕಿತ್ಸಾಲಯ, ಧಾರವಾಡ |

ಹಾವೇರಿ ಮತ್ತು ಕಾರವಾರ ಜಿಲ್ಲೆಗಳಲ್ಲಿ ಕಾರಾವಿ ಚಿಕಿತ್ಸಾಲಯಗಳು ಇರುವುದಿಲ್ಲ.

ಧಾರವಾಡ ಜಿಲ್ಲೆಗೆ ಸಮೀಪದಲ್ಲಿ ಹುಬ್ಬಳ್ಳಿ ನಗರದಲ್ಲಿ 50 ಹಾಸಿಗೆ ಸಾಮರ್ಥ್ಯದ ಕಾರಾವಿ ಆಸ್ಪತ್ರೆ ಹಾಗೂ 04 ಕಾರಾವಿ ಚಿಕಿತ್ಸಾಲಯಗಳು (ಹುಬ್ಬಳ್ಳಿ-1, ತಾರಿಹಾಳ, ವರೂರು ಮತ್ತು ಗೋಕುಲ) ಕಾರ್ಯ ನಿರ್ವಹಿಸುತ್ತಿದೆ.

ಹಾವೇರಿ ಜಿಲ್ಲೆ ಹಾಗೂ ಕಾರವಾರಗಳಲ್ಲಿ ಕಾರಾವಿ ನಿಗಮದ DISPENSARY CUM BRANCH OFFICE ಗಳ ಮುಖಾಂತರ ವಿಮಾದಾರರಿಗೆ ವೈದ್ಯಕೀಯ ಸೇವೆಯನ್ನು ಒದಗಿಸಲಾಗುತ್ತಿದೆ.

| | | |
|---|---|---|
| (ಆ) | ಇ.ಎಸ್.ಐ. ಚಿಕಿತ್ಸಾಲಯ ಮತ್ತು ಆಸ್ಪತ್ರೆಗಳಲ್ಲಿ ಲಭ್ಯವಿರುವ ಆರೋಗ್ಯ ಸೇವೆಗಳು ಯಾವುವು; (ಈ ಕುರಿತು ಮಾಹಿತಿ ನೀಡುವುದು) | ಇ.ಎಸ್.ಐ. ಚಿಕಿತ್ಸಾಲಯಗಳಲ್ಲಿ ವಿಮಾದಾರರಿಗೆ ಹಾಗೂ ಕುಟುಂಬದವರಿಗೆ ಪ್ರಾಥಮಿಕ ಹೊರ-ರೋಗಿ ಚಿಕಿತ್ಸೆಯನ್ನು ಒದಗಿಸಲಾಗುತ್ತಿದ್ದು, ಕಾರಾವಿ ಆಸ್ಪತ್ರೆಗಳಲ್ಲಿ ಪ್ರಾಥಮಿಕ ಮತ್ತು ದ್ವಿತೀಯ ಹಂತದ ಚಿಕಿತ್ಸೆ (PRIMARY AND SECONDARY CARE) ಸಂಪೂರ್ಣ ವೈದ್ಯಕೀಯ ಸೌಲಭ್ಯವನ್ನು ಒದಗಿಸಲಾಗುತ್ತಿದೆ. ಮುಂದುವರೆದು ಹೊಂದಾಣಿಕೆ ಮಾಡಿಕೊಂಡ ಆಸ್ಪತ್ರೆಗಳ ಮುಖಾಂತರ ನಗದುರಹಿತ ದ್ವಿತೀಯ ಹಂತದ ಹಾಗೂ ಉತ್ಕೃಷ್ಟ ಚಿಕಿತ್ಸೆಯನ್ನು ಒದಗಿಸಲಾಗುತ್ತಿದೆ. |
| (ಇ) | ಪ್ರತಿಯೊಂದು ಇ.ಎಸ್.ಐ. ಚಿಕಿತ್ಸಾಲಯ ಹಾಗೂ ಆಸ್ಪತ್ರೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ವೈದ್ಯರು ಹಾಗೂ ಇತರೇ ಸಿಬ್ಬಂದಿಗಳ ಸಂಖ್ಯೆ ಎಷ್ಟು; (ವಿವರವಾದ ಮಾಹಿತಿ ನೀಡುವುದು) | ರಾಜ್ಯದಾದ್ಯಂತ ಇಲಾಖೆಯ ಕಾರಾವಿ ಆಸ್ಪತ್ರೆ ಹಾಗೂ ಕಾರಾವಿ ಚಿಕಿತ್ಸಾಲಯಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ವೈದ್ಯರು ಹಾಗೂ ಸಿಬ್ಬಂದಿಗಳ ವೃಂದವಾರು ವಿವರ ಈ ಕೆಳಕಂಡಂತಿದೆ: |

| ಕ್ರ. ಸಂ | ವೃಂದ | ಕರ್ತವ್ಯ ಹುದ್ದೆಗಳು |
|---|---|---|
| 1 | 'ಎ" ವೃಂದ | 392 |
| 2 | 'ಬಿ" ವೃಂದ | 15 |
| 3 | 'ಸಿ" ವೃಂದ | 775 |
| 4 | 'ಡಿ" ವೃಂದ | 148 |
| **ಒಟ್ಟು** | | **1330** |

| | | |
|---|---|---|
| (ಈ) | ಸದ್ಯ ಇರುವ ಚಿಕಿತ್ಸಾಲಯಗಳನ್ನು ಆಸ್ಪತ್ರೆಗಳನ್ನಾಗಿ ಪರಿವರ್ತಿಸಲು ಸರ್ಕಾರ ಚಿಂತನೆ ನಡೆಸಿದೆಯೇ? (ಮಾಹಿತಿ ನೀಡುವುದು) | ಕೆಲವು ಕಾರಾವಿ ಚಿಕಿತ್ಸಾಲಯಗಳನ್ನು, ಕಾರಾವಿ ಚಿಕಿತ್ಸಾಲಯ Cum ಕಾರಾವಿ ರೋಗ ಪತ್ತೆ ಹಚ್ಚುವ ಕೇಂದ್ರವನ್ನಾಗಿ ಪರಿವರ್ತಿಸುವ ಪ್ರಸ್ತಾವನೆ ಪ್ರಕ್ರಿಯೆಯಲ್ಲಿದೆ |

ಕಡತ ಸಂಖ್ಯೆ: LD-LSI/109/2022

**(ಅರಬೈಲ್ ಶಿವರಾಂ ಹೆಬ್ಬಾರ್)**
**ಕಾರ್ಮಿಕ ಸಚಿವರು**